ಕಾರ್ಖಾನೆಯೊಂದರಲ್ಲಿ 600 ರೂ.ಗಳ ಸಂಬಳದ ಕೆಲಸ ಹಿಡಿದಾಗ, ನಮ್ಮ ನೆಂಟರಲ್ಲೆಲ್ಲಾ ಅವನದೇ ಮಾತು. ಅದರ ಮೇಲೆ 'ಓವರ್ ಟೈಮ್, ರಾತ್ರಿಪಾಳಿ' ಎಂದು ಮತ್ತೂ ನೂರು ಹೆಚ್ಚೇ ಸಂಪಾದಿಸುತ್ತಿದ್ದ.

ರವಿ– ಅವನ ಸಾಹಸಗಾಥೆ, ಕೈ ತುಂಬಾ ಸಂಬಳ, ಬುದ್ಧಿವಂತ–ಪ್ರಬುದ್ಧ ಕಂಪ್ಯೂಟರ್ ಜಾಣ. ನನ್ನೆಲ್ಲ ಪ್ರಶ್ನೆಗಳಿಗೆ ಅವನಲ್ಲಿ ಉತ್ತರವಿತ್ತು. ಏನೆಲ್ಲ ಆಗಿದ್ದ ರವಿ ಆಗ! ರವಿ ನನ್ನ ಕಿಶೋರ ಕಾಲದ 'ಹೀರೋ' ಆಗಿದ್ದ. ಬಿಳಿ ಕುದುರೆಯ ಮೇಲೆ ಕತ್ತಿ ಹಿಡಿದ ಸರದಾರ!

ಆ ಬೆರಗು, ಕುತೂಹಲ, ರವಿಯ ಬಗ್ಗೆಯ ಹೆಮ್ಮೆ, ಕೌತುಕ, ಉಳಿದದ್ದು ನಿಖರವಾಗಿ ಎರಡು ವರ್ಷಗಳು.

ಅಮ್ಮ 'ಎಂಥದ್ದೊ ಒಂದು ಬಿ.ಎ., ಬಿ.ಎಸ್ಸಿ. ಅಂತ ಡಿಗ್ರಿ ಮುಗಿಸಿ ಮದುವೆ ಆಗು' ಅಂತ ಗೊಣಗಿದರೂ, ರವಿ ಪರಿಚಯಿಸಿದ ಕಂಪ್ಯೂಟರ್ ಜಗತ್ತು ಕೈ ಬೀಸಿತ್ತು, ಇಂಜಿನಿಯರಿಂಗ್ ಸೇರಿದೆ. ಎರಡನೇ ವರ್ಷಕ್ಕೆ ಬರುತ್ತಿದ್ದಂತೆ– ಕಂಪ್ಯೂಟರಿನ ಒಳಹೊರಗುಗಳು ತೆರೆದುಕೊಳ್ಳುತ್ತಿದ್ದಂತೆ– ರವಿ ಓರ್ವ ಟೈಪಿಸ್ಟ್‌ಗಿಂತ ಹೆಚ್ಚೇನೂ ಕೆಲಸ ಮಾಡಿರಲಿಲ್ಲ ಎಂದು ಅರಿವಾಗಿತ್ತು. ಸಿದ್ಧ ಕಂಪ್ಯೂಟರ್ 'ಕಾರ್ಯ ಸರಣಿ'ಗಳ ಉಪಯೋಗಿಸುವುದಷ್ಟೆ ಅವನಿಗೆ ಗೊತ್ತಿತ್ತು. ಈಗ ನನ್ನ ಯಾವುದೇ ಪ್ರಶ್ನೆಗಳಿಗೆ ಅವನಲ್ಲಿ ಉತ್ತರವಿರಲಿಲ್ಲ. ನಾನು ಇಂಜಿನಿಯರಿಂಗ್‌ನ ಒಂದೊಂದೇ ವರ್ಷ ಫಸ್ಟ್ ಕ್ಲಾಸ್, ರ್‍ಯಾಂಕ್ ಎಂದು ಪಾಸಾದಂತೆ. ರವಿ ನನ್ನ ಬದುಕಿನ ಒಂದೊಂದೇ ಮೆಟ್ಟಲಲ್ಲಿ ನಪಾಸಾಗುತ್ತ ಇಳಿದ. ನಾನು ಬೆಳೆದಷ್ಟೂ ಅವ ಕುಬ್ಜನಾದ.

ನಾನು ಬಿ.ಇ. ಎರಡನೇ ವರ್ಷದಲ್ಲಿದ್ದಾಗಲೇ ನನಗೆ ಸ್ವಲ್ಪ ಸ್ವಲ್ಪವಾಗಿ ನಮ್ಮ ನಡುವೆ ಆಕಳಿಸುತ್ತಿರುವ ಬಿರುಕು ಕಣ್ಣಿಗೆ ಬಿದ್ದಿತ್ತು. ನಾನು ತೀವ್ರವಾಗಿ ಬಯಸತೊಡಗಿದೆ, ರವಿ ಏನಾದರೂ ಆಗಬೇಕೆಂದೂ... ಏನಾದರೂ!

"ನೀನೇಕೆ ಸಂಜೆ ಕಾಲೇಜಿನಲ್ಲಿ ಬಿ.ಇ.ಗೆ ಸೇರಬಾರದು? ನಿನ್ನ ಗೆಳೆಯ ರಾಜು ಆಗಲೇ ಸೇರಿ ಎರಡು ವರ್ಷ ಮುಗಿಸಿದ್ದಾನೆ" ನಾನು ಕೇಳಿದ್ದೆ.

"ಅಯ್ಯೋ ಅದೆಲ್ಲ ಮಾಡಿ ಏನಾಗಬೇಕಿದೆ? ಆರಾಮಾದ ಕೆಲಸವಿದೆ" ಅಂದಿದ್ದ. 'ಅಲ್ಪತೃಪ್ತ' – ಎಂದು ನನ್ನಲ್ಲೇ ಬೈದುಕೊಂಡೆ.

"ಹೋಗಲಿ ಡಿಪಾರ್ಟ್‌ಮೆಂಟ್ ಪರೀಕ್ಷೆಗಳಿಗಾದ್ರೂ ಸರಿಯಾಗಿ ತಯಾರಾಗಬಾರದ? ಈ ಬಾರಿಯೂ ಫೇಲ್ ಆಗಿ ಕುಳಿತೆಯಲ್ಲ?..." ನಾನು ಅಸಮಧಾನ ವ್ಯಕ್ತಪಡಿಸಿದಾಗ ಅವನಲ್ಲಿ ಸಿದ್ಧ ಉತ್ತರಗಳಿರುತ್ತಿತ್ತು–

"ತಯಾರಾಗೋದೇನಿದೆ ಶಶಿ? ಹೇಗಿದ್ರೂ ಅವರಿಗೆ ಬೇಕಾದವರಿಗೆ ಮಾತ್ರ ಬಡ್ತಿ ಕೊಡೋದು. ಆ ಬೆಣ್ಣೆ ಕೃಷ್ಣ ನೋಡು, ಬಂದು ಐದು ವರ್ಷ ಆಗಿಲ್ಲ, ಎರಡು ಬಡ್ತಿ ಗಿಟ್ಟಿಸಿದ್ದಾನೆ. ಬಾಸ್‌ಗೆ ಎಷ್ಟು ಬೆಣ್ಣೆ ಒತ್ತುತ್ತಾನೆ ಗೊತ್ತಾ?..." ಎಂದೇನೋ ಅವರಿವರ ಏಳಿಗೆಯಲೆಲ್ಲ ಡೊಂಕು ಹುಡುಕುತ್ತಿದ್ದ. ನಾನು ಬೇಜಾರು ಮಾಡಿಕೊಂಡು ಕುಗ್ಗಿದಾಗ– "ಹೇಗೂ 'ಟೈಮ್ ಸ್ಕೇಲ್' ಬಡ್ತಿ ಬರುತ್ತಲ್ಲ ಬಿಡು ಶಶಿ..." ಎಂದು ಸಮಾಧಾನಪಡಿಸಲು ನೋಡಿದ.

"ಹುಂ... ಅದು ಬಂದಾಗ ನೀನು ಮುದುಕನಾಗಿರ್ತೀಯ" ರೇಗಿದ್ದೆ. ಅವ ಸುಮ್ಮನೆ ಹಾಯಾಗಿ ನಕ್ಕು ಬಿಟ್ಟ.